ಷೆಡ್ಯೂಲ್ B ರೇಟುಗಳು.

ತಪಶೀಲು.	ರೇಟುಗಳು.			ಪರಾ.
	ರೂ.	ಆ.	ಪೈ.	
ಪ್ರಯಾಣಸ್ಥರೊಡನೆ ನಾಲ್ಕು ಚಕ್ರದ ಗಾಡಿ	0	12	0	
ಡಿಟೋ ಇಲ್ಲದೆ ಇರುವ ಡಿಟೋ	0	6	0	
ಡಿಟೋ ಇರುವ ಎರಡು ಚಕ್ರದ ಗಾಡಿ	0	8	0	
ಪ್ರಯಾಣಸ್ಥರೊಡನೆ ಇಲ್ಲದೆ ಇರುವ ಎರಡುಚಕ್ರದ ಗಾಡಿ	0	4	0	
ಗಾಡಿ ಬೋಜಾ ಸಹಿತವಾದದ್ದು	0	4	0	
ಡಿಟೋ ಬೋಜಾ ಇಲ್ಲದ್ದು	0	2	0	
ಆನೆ	1	0	0	
ಒಂಟೆ	0	4	0	
ಕುದುರೆ ಸವಾರನುಳ್ಳದ್ದು	0	1	6	
ಡಿಟೋ ಸವಾರನಿಲ್ಲದ್ದು	0	0	9	
ಕುದುರೆ ಮರಿ, ಸವಾರನುಳ್ಳದ್ದು	0	0	9	
ಡಿಟೋ ಸವಾರನಿಲ್ಲದ್ದು	0	0	6	
ಎತ್ತು ಬೋಜಾ ವುಳ್ಳದ್ದು	0	1	0	
ಡಿಟೋ ಬೋಜಾ ಇಲ್ಲದ್ದು	0	0	6	
ಕತ್ತೆ ಬೋಜಾ ವುಳ್ಳದ್ದು	0	0	6	
ಡಿಟೋ ಬೋಜಾ ಇಲ್ಲದ್ದು	0	0	3	
ಪಲ್ಲಕ್ಕಿ	0	4	0	
ಕುರಿ, ಆಡು ದೂ ಹಂದಿ	0	0	1	

ಸಿ. ಕೃಷ್ಣರಾವ್,
ಘಾರ್ ಪ್ರೆಸಿಡೆಂಟ್ ಡಿಸ್ಟ್ರಿಕ್ಟ್ ಫಂಡ್ ಬೋರ್ಡ್.

ಮೈಸೂರು ಸಿಟಿ ಮ್ಯುನಿಸಿಪಾಲಿಟಿ.

ತಾರೀಖು 23ನೆ ಮಾಹೆ ಏಪ್ರೆಲ್ 1904.

ಸ್ರ 1904ನೆ ಇಸವಿ ಜುಲೈ ಮಾಹೆ ತಾರೀಖು 1ರ ಲಾಗಾಯಿತು 1905ನೆ ಇಸವಿ ಜೂನ್ ಮಾಹೆ ತಾರೀಖು 30ರ ವರಿಗೆ ಈ ಕೆಳಗಿನ ಎ. ಷೆಡ್ಯೂಲಿನಲ್ಲಿ ನಮೂದಿಸುವ ಮೈಸೂರು ಸಿಟಿಗೆ ಸೇರಿದ ತಮಾಂ ಟೋಲು ಗೇಟುಗಳ ಮುಖಾಂತ್ರ ಸಿಟಿ ವಳಕ್ಕೆ ಬರುವ ಗಾಡಿಗಳು, ಜಾನವರುಗಳು ವಗ್ಗೆರೆಗಳ ಮೇಲೆ ಬಿ. ಷೆಡ್ಯೂಲಿನಲ್ಲಿ ನಮೂದಾಗುವ ದರದಂತೆ, ಸಿಟಿ ಮ್ಯುನಿಸಿಪಲ್ ರೆಗ್ಯುಲೇ ಷ್ರ 49 ಮತ್ತು 51ನೆ ಸೆಕ್ಷ್ರ್ಗಳಲ್ಲಿ ನಮೂದಿರುವ ಷರತ್ತುಗಳಿಗೆ ವಳಪಡಿಸಿ ಪ್ರತಿಬಂದು ಟೋಲುಗೇಟಿನಲ್ಲಿಯಾಗಲಿ ಅಥವಾ ದರೋಬಸ್ತು ಗೇಟುಗಳಲ್ಲಿದ್ದಾಗಲಿ, ಟೋಲು ವಸೂಲ್ಮಾಡುವ ಬಾಬನ್ನು 1904ನೆ ಇಸವಿ ಮೇ ಮಾಹೆ ತಾರೀಖು 14ನೆ ಮಧ್ಯಾನ್ಹ 1 ಘಂಟೆಯ ಲಾಗಾಯಿತು ರಂಗಾಚಾರ್ಲು ಯವರ ಮವೋರಿಯಲ್ ಹಾಲಿನಲ್ಲಿ ಪೈಸಿಡೆಂಟರವರಿಂದ ಯಾ ಅವರಿಂದ ಸ್ಪೆಷಲ್ಲಾಗಿ ನೇಮಿಸಲ್ಪಟ್ಟ ಇತರ ಆಫಿಸರವರಿಂದ, ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

2. ಹರಾಜಿನಲ್ಲಿ ಬಾಬನ್ನು ಪಡೆಯುವ ಕಂಟ್ರಾಕ್ಟರು ಬಿ. ಷೆಡ್ಯೂಲಿನಲ್ಲಿ ನಮೂದಾಗುವ ರೇಟಿನಂತೆಯೇ ಗೇಟುಗಳ ಮುಖಾಂತರ ಸಿಟಿ ವಳಕ್ಕೆ ಬರುವ ಗಾಡಿ ವಗ್ಗೆರೆಗಳ ಮೇಲೆ ಟೋಲು ವಸೂಲ್ಮಾಡಬೇಕು. ಹೆಚ್ಚು ರೇಟನ್ನು ವಸೂಲ್ಮಾಡಕೂಡದು ಶಿವಾಯಿ ಪೈಸಿಡೆಂಟರವರಿಂದ ವಿಧಾಯಕ ಮಾಡಲ್ಪಡುವ ಫಾರಂನಲ್ಲಿ ಕ್ರಮವಾಗಿ ಸಾಲು ಮಾಹೆ ತಾರೀಖು ನಿತಿ ಟೋಲು ಪಾವತಿ ಮಾಡತಕ್ಕ ಆಸಾಮಿಗಳಿಗೆ ರಶೀದಿ ಕೊಡಬೇಕು.

3. ಎಲ್ಲಾ ದರಕ್ಕಿಂತ ಜಾಸ್ತಿ ದರವನ್ನೇ ಆಗಲಿ ಅಥವಾ ಮತ್ಯಾವ ದರವನ್ನೇ ಆಗಲಿ ಮಂಜೂರು ಮಾಡುವ ಅಧಿಕಾರವು ಪೈಸಿಡೆಂಟರವರಲ್ಲಿರುತ್ತದೆ.

4. ಪ್ರತಿ ತಿಂಗಳು 10ನೆ ತಾರೀಖುವಳಗಾಗಿ ಹಿಂದಣ ಮಾಹೆಯ ಖಿಸ್ತು ಮೊಬಲಗನ್ನು ಪಾವತಿ ಮಾಡಬೇಕು. ಹರಾಜು ಆಖ್ಯೈರಾದ ಕೂಡ್ಲೆ ಬಾಬನ್ನು ಪಡೆಯತಕ್ಕ ಕಂಟ್ರಾಕ್ಟರು ಎರಡು ಮಾಹೆಗಳ ಖಿಸ್ತಿಗೆ ಸಮವಾದ ಮೊಬಲಗನ್ನು ಡಿಪಾಜಿಟ್ ಬಗ್ಗೆ ಹಾಜರ್ಮಾಡಬೇಕು. ಷರತ್ತುಗಳ ಪ್ರಕಾರ ಕಂಟ್ರಾಕ್ಟು ನಡೆದರೆ, ಡಿಪಾಜಿಟ್ಟಿನಲ್ಲಿರುವ ಮೊಬಲಗನ್ನು ಆಖ್ಯೈರು ಎರಡು ಮಾಹೆಗಳ ಖಿಸ್ತು ಬಗ್ಗೆ ಜಮೆಗೆ ತೆಗೆದುಕೊಳ್ಳುತ್ತೆ.

5. ಹರಾಜು ಆಖ್ಯೈರಾದ ಕೂಡ್ಲೆ ಡಿಪಾಜಿಟ್ ಬಗ್ಗೆ ಮೊಬಲಗನ್ನು ಹಾಜರ್ಮಾಡದೆ ಇದ್ದರೆ, ಖರ್ಚಿಗು ಮತ್ತು ಲುಕ್ಸಾನಿಗೂ, ಅವ್ವಲ್ ಕಂಟ್ರಾಕ್ಟದಾರನನ್ನು ಗುರಿಪಡಿಸಿ ಪುನಹಾ ಹರಾಜು ಮಾಡಿಸುತ್ತೆ. ಖಿಸ್ತು ಮೊಬಲಗನ್ನು ವಾಯಿದೆ ವಳಗೆ ಹಾಜರ್ಮಾಡಲು ತಪ್ಪಿದರೆ, ಡಿಪಾಜಿಟ್ ಮೊಬಲಗನ್ನು ದಂಡವಾಗಿ ತೆಗದುಕೊಂಡು ಬಾಬನ್ನು ದುಸರಾ ಹರಾಜು ಮಾಡಿಸಿ ಆದರಲ್ಲಿ ನಷ್ಟವೇನಾದರೂ ಆದಲ್ಲಿ ಆ ನಷ್ಟಕ್ಕೆ ಅವ್ವಲ್ ದರಖಾಸ್ತು ದಾರನನ್ನು ಗುರಿಪಡಿಸುತ್ತೆ. ಎರಡನೆ ಹರಾಜಿನಲ್ಲಿ ನಫೆ ಬಂದಲ್ಲಿ, ಮೊದಲು ದರಖಾಸ್ತು ದಾರನಿಗೆ ಸದರಿ ನಫೆಗೆ ಹಕ್ಕು ಇರುವದಿಲ್ಲ.

6. ಪ್ರತಿ ಬಬ್ಬ ಕಂಟ್ರಾಕ್ಟರು ರೋಜೀನಾ ಟೋಲುಗೇಟುಗಳ ಮುಖಾಂತ್ರ ಪ್ರವೇಶಮಾಡುವ ತರಹಾವಾರಿ ಗಾಡಿ ಯಾ ಜಾನವರುಗಳು ಇವುಗಳ ಮೇಲೆ ವಸೂಲಾದ ಟೋಲ್ ಯಾನೆ ಸುಂಕ ಇವುಗಳ ತಪಶೀಲು ತೋರಿಸುವ ಲೆಖ್ಖವನ್ನು ಪೈಸಿಡೆಂಟರವರು ವಿಧಾಯಕ ಮಾಡುವ ನಮೂನೆಯಲ್ಲಿಟ್ಟು, ಅಂಥಾ ಲೆಖ್ಖವನ್ನು ಕಂಟ್ರಾಕ್ಟರು ಪ್ರತಿ ಮಾಹೆಯಲ್ಲಿಯೂ, ಪೈಸಿಡೆಂಟರವರ ಇನ್ಸ್ಪೆಕ್ಷನ್ ಬ್ಯೆ ಹಾಜರ್ಮಾಡಬೇಕು. ಶಿವಾಯಿ ಸಾಯರು ಅಥವಾ ಮ್ಯುನಿಸಿಪಲ್ ಉದ್ಯೋಗಸ್ಥರು ಅಪೇಕ್ಷಿಸಿದಾಗ ಅಂಥಾ ಲೆಖ್ಖಗಳನ್ನು ಅವರ ಇನ್ಸ್ಪೆಕ್ಷನ್ ಬ್ಯೆ ಹಾಜರ್ಮಾಡುವದಕ್ಕೂ ಬದ್ಧನಾಗಿರತಕ್ಕದ್ದು.

7. ಪ್ರತಿ ಬಬ್ಬ ಕಂಟ್ರಾಕ್ಟರು ಟೋಲು ಗೇಟುಗಳ ಮುಖಾಂತರ ಬರತಕ್ಕ ಗಾಡಿ ಯಾ ಜಾನವರುಗಳ ತಪಶೀಲು ಲೆಖ್ಖವನ್ನು 6ನೆ ಕಲಂನಲ್ಲಿ ನಮೂದಿಸಿರುವಂತೆ, ಇಡತಕ್ಕ ಬ್ಯೆ ಆಯಾಯ ಕಂಟ್ರಾಕ್ಟುದಾರನ ಸ್ವಂತ ಖರ್ಚಿನಿಂದ ಪ್ರತಿನಂದು ಟೋಲುಗೇಟಿನಲ್ಲಿಯೂ, ಬಬ್ಬೊಬ್ಬ ಮುತ್ಸದ್ದಿಯನ್ನಿಡುವದಕ್ಕೆ ಬದ್ಧನಾಗಿರತಕ್ಕದ್ದು.

8. ಹಾಲಿ ಇರುವ ಟೋಲುಗೇಟುಗಳನ್ನು ಮತ್ತು ಮನೆಗಳನ್ನು ಕಂಟ್ರಾಕ್ಟರು ಬಳ್ಳೀ ಸ್ಥಿತಿಯಲ್ಲಿಟ್ಟುಕೊಂಡು, ಅವುಗಳನ್ನು ಉಪಯೋಗ ಮಾಡಿಕೊಳ್ಳಬಹುದು.

9. ಈ ಮೇಲ್ಕಂಡ ಪರತ್ತುಗಳಿಗೆ ಬಳಪಟ್ಟು ಕಂಟ್ರಾಕ್ಟು ಬಾಬನ್ನು ಸಲೀಸು ನಡೆಸಿಕೊಂಡು ಹೋಗತಕ್ಕ ವಿಚಾರದಲ್ಲಿ ಕಂಟ್ರಾಕ್ಟರು ಪೈಸಿಡೆಂಟರವರಿಂದ ವಿಧಾಯಕವಾದ ನಮೂನೆಯಲ್ಲಿ ಭೂಪಾ ಕಾಗದದಲ್ಲಿ ರೂಲ್ಸ್ ಪ್ರಕಾರ ಮುಚ್ಚಳಿಕೆ ಬರೆದು ಕೊಡಬೇಕು.

10 ಈ ಕೆಳಗೆ ನಮೂದಾಗುವವುಗಳಮೇಲೆ ಕಂಟ್ರಾಕ್ಟರು ಟೋಲನ್ನು ವಸೂಲ್ಮಾಡಕೂಡದು.

(1) ಮ್ಯುನಿಸಿಪಾಲಿಟಿಗ ತೆರಿಗೆ ಪಾವತಿಮಾಡಿ ನಂಬರು ಹಾಕಿಸಿಕೊಂಡಿರತಕ್ಕ ಗಾಡಿಗಳು ಅಥವಾ ಕ್ಯಾರೇಜುಗಳು ಮ್ಯುನಿಸಿಪಾಲಿಟಿಯಿಂದ ಪಡೆದಿರತಕ್ಕ ವ್ಯಾಸುಗಳನ್ನು ಹಾಜರ್ಮಾಡುವ ಗಾಡಿಗಳು ಅಥವಾ ಜಾನವರುಗಳು ಮತ್ತು ಗವರ್ಮೆಂಟ್ ಯಾ ಮ್ಯುನಿಸಿಪಲ್ ಕಮಿಶರ್ಪಗೆ ಸೇರಿದ ಅಥವಾ ಸಾಮಾನು ವಗೈರೆ ಸಾಗಿಸುವದಕ್ಕಾಗಿ ಮೊಕರರ್ರಾಡಲ್ಪಟ್ಟ ಕ್ಯಾರೇಜುಗಳು, ಗಾಡಿಗಳು ಮತ್ತು ಜಾನವರುಗಳ ಮೇಲೆ ಮತ್ತು ಒಂದು ದಿವಸದಲ್ಲಿ 24 ಘಂಟೆಯು ಕಾಲದೊಳಗಾಗಿ ಅಂದರೆ ಒಂದು ಮಧ್ಯರಾತ್ರಿಯಿಂದ ಇನ್ನೊಂದು ಮಧ್ಯರಾತ್ರಿಯವರಿಗೂ, ಯಾವ ಕ್ಯಾರೇಜುಗಾಡಿ ಅಥವಾ ಜಾನವರುಗಳ ಮೇಲೆಯೇ ಆಗಲಿ, ಒಂದುಸಾರಿಗಿಂತಲೂ ಹೆಚ್ಚಾಗಿ ಟೋಲು ವಸೂಲ್ಮಾಡಕೂಡದು.

(2) ಟೋಲು ಮುಖಾಂತರ ಬರತಕ್ಕ ಸೈನಿಕರ ವಾಹನಕ್ಕಾಗಿ ಅಥವಾ ಅಂಥಾ ಸೈನಿಕರ ಸಾಮಾನು ವಗೈರೆ ಸಾಗಿಸತಕ್ಕ ಬ್ಯೆ ಉಪಯೋಗಿಸುವ ಗಾಡಿ ಅಥವಾ ಜಾನವರುಗಳ ಮೇಲೆ ಮಿಲಿಟರಿ ಅಥವಾ ಗವರ್ಮೆಂಟ್ ಸ್ಟೋರಿಗೆ ಸಾಗಿಸಲ್ಪಡುವ ಸಾಮಾರ್ಗಳು ಇರತಕ್ಕ ಗಾಡಿ ಅಥವಾ ಜಾನವರುಗಳ ಮೇಲೆ ಸರ್ಕಾರಿ ಡ್ಯೂಟಿಯ ಮೇಲೆ ಬರತಕ್ಕ ಪೊಲೀಸು ಆಫಿಸರರು, ನೌಕರವಾನೇರು ಅವರ ಕ್ಯಾರೇಜುಗಳು, ಗಾಡಿಗಳು ಮತ್ತು ಜಾನವರುಗಳು ಇವುಗಳ ಮೇಲೆ ಮತ್ತು ಅರಮನೆ ಇಲಾಖೆಗೆ ಸೇರಿದ ಗಾಡಿಗಳು, ಕ್ಯಾರೇಜುಗಳು, ಜಾನವರುಗಳು ಇವುಗಳಮೇಲೆ ಸಹಾ.

ನಂಬರು.	ಷೆಡ್ಯೂಲ್ A.		
1	ರೈಲ್ವೆ ಸ್ಟೇಷನ್ ರಸ್ತೆ	...	ಬಳಗುಳದ ರಸ್ತೆ ಮತ್ತು ಸಿಕ್ ಲೈನ್ ರಸ್ತೆ ಇವೆರಡು ಜಂಕ್ಷನ್ ಆಗುವ ಸ್ಥಳದಲ್ಲಿರುವ ಉಕ್ಕಡ
2	ಬಳಗುಳದ ರಸ್ತೆ	..	ಕೆಂಪನಕಟ್ಟೆ ಉಕ್ಕಡ
3	ಶ್ರೀರಂಗಪಟ್ಟಣದ ರಸ್ತೆ	..	ಎರಕಟ್ಟೆ ಡಿಟೋ
4	ಬೆಂಗಳೂರು ರಸ್ತೆ	..	ವೀರನಗೆರೆ ಡಿಟೋ
5	ಸೆಮಿಟೆರಿ ರಸ್ತೆ	..	ಬಂಗ್ಲಿ ಸಂತ್ರಿ ಡಿಟೋ
6	ಮಹದೇವಪುರದ ರಸ್ತೆ	..	ಜಲಪುರಿ ಡಿಟೋ
7	ಆಲನಹಳ್ಳಿ ರಸ್ತೆ	..	ಇಟ್ಟಿಗೆಗೂಡು ಡಿಟೋ
8	ರೇಸುಕೋರ್ಸ್ ರಸ್ತೆ	...	ರೋಣಸಂತ್ರಿ ಡಿಟೋ
9	ನಂಜನಗೂಡು ರಸ್ತೆ	..	ನಂಜನಗೂಡು ಡಿಟೋ
10	ಡಿಟೋ	..	ಹಾಲಿ ಉಕ್ಕಡದಬಳಿ ವಿಧಾಯಕ ಮಾಡಿರುವಂತೆ ನಾಚನಹಳ್ಳಿ ಉಕ್ಕಡ
11	ಮಾನಂದವಾಡಿ ರಸ್ತೆ	...	ಚಟ್ಟನಹಳ್ಳಿ ಉಕ್ಕಡ
12	ನೈಸ್ಸಾಯಿ ರಸ್ತೆ	..	ಹೊಲಗೇರಿ ಡಿಟೋ
13	ಚಾಮರಾಜ ಅಗ್ರಹಾರದ ಹಿಂಭಾಗದ ರಸ್ತೆ	...	ಡಿಟೋ
14	ಜ್ಯಾಬಿಲಿ ರಸ್ತೆ	...	ಕುಕ್ಕನಹಳ್ಳಿ ಡಿಟೋ
15	ಇಲವಾಲದ ರಸ್ತೆ	..	ಶ್ರೀರಾಮಪೇಟೆ ಡಿಟೋ

ನಂಬರು.	ಷೆಡ್ಯೂಲ್ B.	ರೂ.	ಆ.	ಪೈ.
	ಟೋಲುಗೇಟುಗಳಲ್ಲಿ ವಸೂಲು ಮಾಡತಕ್ಕ ದರಗಳ ತಪಸೀಲು.			
1	ಸ್ಪ್ರಿಂಗು ಇರತಕ್ಕ ಪ್ರತಿ ಬಂದು ನಾಲ್ಕು ಚಕ್ರದ ಕ್ಯಾರೇಜಿಗೆ	0	4	0
2	ಡಿಟೋ 2 ಚಕ್ರದ ಕ್ಯಾರೇಜಿಗೆ	0	2	0
3	ಮನುಷ್ಯರು ಯಾ ಎತ್ತುಗಳು, ಕುದುರೆಗಳು, ಹೇಸರಕತ್ತೆಗಳು ಇವುಗಳಿಂದ ಎಳೆಯಲ್ಪಟ್ಟ ಭರ್ತಿಗಾಡಿಗಳು ಅಥವಾ ಹ್ಯಾಕ್ನಿ ಗಾಡಿ 1ಕ್ಕೆ	0	2	0
4	ಡಿಟೋ ಖಾಲಿ ಇರತಕ್ಕ ಪ್ರತಿ ಬಂದು ಗಾಡಿಗೆ	0	1	0
5	ಡಿಟೋ ಹೇರು ಹೇರಿಕೊಂಡು ಬರತಕ್ಕ ಕೋಣ ಯಾ ಎಮ್ಮೆ 1ಕ್ಕೆ ..	0	0	6
6	ಡಿಟೋ ಸವಾರಿ ಅಥವಾ ಹೇರು ಹೇರಿಕೊಂಡು ಬರತಕ್ಕ 13 ಹಿಡಿಗಳಿಗಿಂತಲೂ, ಮಿರಿದ ಕುದುರೆ 1ಕ್ಕೆ	0	1	0
7	ಹೇರು ಇಲ್ಲದೆ ಅಥವಾ ಸವಾರಿ ಇಲ್ಲದೆ ಬರತಕ್ಕ ಕುದುರೆ 1ಕ್ಕೆ	0	0	6
8	13 ಹಿಡಿಗಳು ಅಥವಾ ಅದಕ್ಕಿಂತ ಕಮ್ಮಿಯಾಗಿರತಕ್ಕ ಸವಾರಿ ಅಥವಾ ಹೇರು ಇರುವ ಕುದರೆ 1ಕ್ಕೆ	0	0	6
9	ಡಿಟೋ ಆನೆ 1ಕ್ಕೆ	0	8	0
10	ಡಿಟೋ ಒಂಟೆ 1ಕ್ಕೆ	0	1	0

ಕೆ. ಶ್ರೀನಿವಾಸರಾವ್,
ಫಾರ್ ಪೈಸಹೋಬ್.